St. Norbert
# Campus Chronicles



Vol -3, Issue 2 St. Norbert School, CBSE Affliation No: 831041, Chowhalli, T. Narasipura - 571124 December - 2022

## Christmas Message by Fr. Benny Thomas O. Praem - Manager



During this Christmas season a friend of mine sent me this story, a legend about the Nativity of Jesus. When the shepherds received the news of the birth of Jesus from the angel all of them went to find thechild, bringing with them little gifts the things which they had with them like milk, cottage cheese, honey, etc. Among all these shepherds there was a boy Who had nothing to bring to the newborn babe; He came with empty hands, feeling very ashamed and blushing because he couldn't offer anything. When the shepherds reached the place indicated by the star, they found the baby, Mary his Mother, and Joseph. There in that place were also the three wise men from the east with precious gifts like gold, frankincense, and myrrh. Since Mary was holding the newborn baby In her arms, it was difficult for her to receive the gifts they'd brought, to accept them and thank everyone for coming. So, the legend continues, she asked the little shepherd boy who had nothing in his hands to hold the baby while she gave all her attention and thanks to the shepherds and everyone else present. And the story concludes by saying how the humblest of the shepherds, a little shepherd boy had the great privilege to be the first, and the only one that night, to hold the Messiah, the Saviour, Jesus in his arms.This legend tells us that God Recognises the poorest, humblest, neediest, and most rejected people of this world and rewards them with his Presence. It also brings us the revelation how God through Mary, the Blessed Mother helps us to carry the Child Jesus. Mary will give us the Infant Jesus to carry in our lives, Mary always recognises the earnest seeker and rewards them with the gift of Jesus like the little shepherd boy. This Christmas, there might be many people who cannot afford the glitter of Christmas ,who cannot give gifts or no one to give gifts but God is a loving God who loves everyone , especially the poorest who cannot give any offering but their love, to such people God gives himself as a gift. Christmas is not us giving a gift to others or God but God giving us a gift, a precious gift of His Son, Jesus Christ. Christmas is YOU, when you plan to help others. Christmas decorations are you, when your colours are reflecting in others life. The Christmas bell is you, when you recall others your love. You are a Christmas light, when you illuminate others with your thoughts. The Christmas angels are you, when you protect and care others. The Christmas star is you, when you lead someone to truth. Christmas music is you when you comfort others. The Christmas gift is you, when you are become a friend to an ignored. The Christmas card is you, when you help the illiterate. The Christmas greeting is you, when you wish everybody. The Christmas dinner is you, when you give bread and water to hunger one. Thank you and Happy Christmas.

## ಸ್ಫೂರ್ತಿದಾಯಕ ವ್ಯಕ್ತಿತ್ವ " ಫಾದರ್ ಜೋಸ್ ಮುರಿಕ್ಕನ್ ಓ. ಪ್ರೇಮ್ " – ಲೋಕೇಶ್ ಡಿ, ಸಂಯೋಜಕರು



ನೇರ ನಡೆ–ನೇರ ನುಡಿ, ಇತರರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಮನೋಭಾವ, ಎಲ್ಲರೊಂದಿಗೆ ಬೆರೆಯುವ ಹೃದಯ ವೈಶಾಲ್ಯ, ತಪ್ಪನ್ನು ಕಂಡುಹಿಡಿಯುವ ಜಾಣ್ಮೆಯ ಜೊತೆಗೆ ಸರಿಯಾದುದನ್ನು ತೋರಿಸಿಕೊಡುವ ಬುದ್ಧಿವಂತಿಕೆ, ಸರಳ ಸಜ್ಜನಿಕೆಯ ಸ್ವಭಾವ, ಗುಣಗ್ರಾಹಿ, ಸ್ಫೂರ್ತಿದಾಯಕ ವ್ಯಕ್ತಿತ್ವ, ಆಕರ್ಷಕ ವಾಗ್ಝರಿ, ಉತ್ತಮ ನಾಯಕತ್ವ ಗುಣ, ಪ್ರೇರಣಾತ್ಮಕ ಆಡಳಿತಗಾರಿಕೆ, ಕುಶಾಗ್ರಮತಿ, ವ್ಯವಸ್ಥೆಯನ್ನು ಸುಧಾರಿಸುವಲ್ಲಿ ತೋರುವ ಹುಮ್ಮಸ್ಸು, ಕ್ರಿಯಾಶೀಲತ್ವ, ಸೃಜನಶೀಲತ್ವ, ಅಧ್ಯಯನ ಶೀಲತ್ವ, ಶಿಸ್ತು, ಸದಾ ಕೌಶಲ್ಯ ವರ್ಧನೆಗೆ ಒತ್ತು ಕೊಡುವ ಸ್ವಭಾವ, ಅತ್ಯುತ್ತಮ ಮಾರ್ಗದರ್ಶಕ, ವಿಷಯ ವಿಶ್ಲೇಷಕ, ನಿರಂತರ ವಿದ್ಯಾರ್ಥಿ, ಸಮರ್ಥ ಶಿಕ್ಷಕ, ಪ್ರಬುದ್ಧ ಆಲೋಚನೆ ಇವೇ ಮೊದಲಾದ ಮಾನವೀಯ ಮೌಲ್ಯಾಧಾರಿತ ಗುಣ ಸ್ವಭಾವಗಳನ್ನು ತನ್ನೊಳಗೆ ಲೀನವಾಗಿಸಿಕೊಂಡಿರುವ ವ್ಯಕ್ತಿಯೆಂದರೆ ಅವರೇ ನಮ್ಮ ಶಾಲೆಯ ನಿರ್ಗಮಿತ ವ್ಯವಸ್ಥಾಪಕರಾದ ಡಾ. ರೆ. ಫಾ. ಜೋಸ್ ಮುರಿಕ್ಕನ್‌ರವರು. ಅವರ ಕುರಿತಾಗಿ ಒಂದು ಲೇಖನ ಬರೆಯಲು ನನಗೆ ನಿರ್ದೇಶಿಸಿದಾಗ ನಾನು ಅತ್ಯಂತ ಉತ್ಸುಕನಾಗಿ ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಲು ಮನಸ್ಸು ಮಾಡಿದೆ. ನಾನು ಮೇಲೆ ನಮೂದಿಸಿರುವುದು ಅವರ ಮುಖಪುಟವಷ್ಟೆ. 'ದೇವ ನಿನ್ನಂತರಂಗವ ಬಲ್ಲವರ್ಯಾರೋ' ಎನ್ನುವಂತೆ ಅವರಲ್ಲಿರುವ ಅಗಾಧ ಪ್ರಚ್ಛನ್ನ ಶಕ್ತಿಯನ್ನು ಅರಿಯುವುದು ಅಸಾಧ್ಯವೇ ಸರಿ. ಒಬ್ಬ ವ್ಯಕ್ತಿಯ ಬಗ್ಗೆ ಬರೆಯುವುದೇ ಬಲು ಕಷ್ಟದ ಕೆಲಸ ಅಂತಹುದರಲ್ಲಿ ಫಾ. ಜೋಸ್‌ರಂತಹವರ ಬಗ್ಗೆ ಬರೆಯುವುದು ಒಂದು ಸಾಹಸದ ಕೆಲಸ. ಫಾ. ಜೋಸ್‌ರವರು ನಮ್ಮ ಶಾಲೆಗೆ ವ್ಯವಸ್ಥಾಪಕರಾಗಿ ನೇಮಕವಾಗಿ ಬಂದ ಹೊಸದರಲ್ಲಿ ಆಗಷ್ಟೇ ಕೊರೋನಾ ಮಹಾಮಾರಿಯ ಮೊದಲನೇ ಅಲೆಯ ಗತಿ ನಿಧಾನವಾಗಿ ಅದರ ಅಟ್ಟಹಾಸ ಕುಗ್ಗುತ್ತಿದ್ದ ಸಮಯ. ಪ್ರಪಂಚದಾದ್ಯಂತ ಎಲ್ಲಾ ಕ್ಷೇತ್ರಗಳೂ ಕುಸಿದು ಹೋಗಿದ್ದಂತೆಯೇ ನಮ್ಮ ಶಿಕ್ಷಣ ಕ್ಷೇತ್ರವೂ ತನ್ನ ಪ್ರಖರತೆಯನ್ನು ಕಳೆದುಕೊಂಡಿತ್ತು. ಅದನ್ನು ಸಂಪೂರ್ಣವಾಗಿ ಕಳೆದುಕೊಳ್ಳಲು ಬಿಡದಂತೆ ಆನ್‌ಲೈನ್ ಮೂಲಕ ಶಿಕ್ಷಣಕ್ಕೆ ತೇಪೆ ಹಚ್ಚುವ ಕಾರ್ಯ ಭರದಿಂದ ಸಾಗಿತ್ತು. ಇಂತಹ ಕ್ಷುದ್ರ ಸಮಯದಲ್ಲಿ ಫಾ. ಜೋಸ್‌ರವರು ನಮ್ಮ ಶಾಲೆಯ ಒಳ ಪ್ರವೇಶಿಸಿದರು. ಶಾಲೆಗೆ ಒಬ್ಬ ನೂತನ ನಾಯಕನ ಆಗಮನವಾಯಿತು. ಹೊಸ ದಿಕ್ಕಿನೆಡೆಗೆ ಸಾಗುತ್ತಿದ್ದ ನೌಕೆಗೆ ಪ್ರಬುದ್ಧ ನಾವಿಕ ಸಿಕ್ಕಂತಾಯಿತು. ಆನ್‌ಲೈನ್ ತರಗತಿಗಳ ಬಗ್ಗೆ ಅಲ್ಪಜ್ಞಾನಿಗಳಾಗಿದ್ದ ನಮಗೆ ಒಂದು ಸುವ್ಯಸ್ಥಿತವಾದ ಚೌಕಟ್ಟು ಕೊಟ್ಟು ಅದಕ್ಕೆ ಪೂರಕವಾದ ಮಾಹಿತಿ ನೀಡಿ ನಮ್ಮಲ್ಲಿ ಕಾರ್ಯಕ್ಷಮತೆಯನ್ನು ಇಮ್ಮಡಿಗೊಳಿಸುವಲ್ಲಿ ಯಶಸ್ವಿಯಾದರು. ಇವರ ಮಾರ್ಗದರ್ಶನವು ಶಿಕ್ಷಕರೆಲ್ಲಾ ತಂತಮ್ಮ ಕೌಶಲ್ಯಗಳನ್ನು ವೃದ್ಧಿಸಿಕೊಂಡು ಬದಲಾದ ಪರಿಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಕಾರಿಯಾಯಿತು. ಇವರು ಯಾವಾಗಲೂ ಹೇಳುತ್ತಿದ್ದುದು ಏನೆಂದರೆ ಶಿಸ್ತು. ಹೇಳುತ್ತಿದ್ದುದು ಮಾತ್ರವಲ್ಲ ತಾವೂ ಸಹ ಅದಕ್ಕೆ ಮಾದರಿಯಾಗಿದ್ದರು. ಅದಕ್ಕೆ ಪೂರಕ ಎಂಬಂತೆ ಅವರು ಸಮಯಕ್ಕೆ ನೀಡುತ್ತಿದ್ದ ಬೆಲೆ ಅಷ್ಟಿಷ್ಟಲ್ಲ. ಅಂದುಕೊಂಡ ಕಾರ್ಯ ಅಂದುಕೊಂಡ ಸಮಯದಲ್ಲಿ ಪೂರೈಸಬೇಕು ಎನ್ನುವ ಮನೋಭಾವ ಸಾಮಾನ್ಯರಿಗೆ ಬರುವುದಿಲ್ಲ. ಶಿಕ್ಷಕರ ದೃಷ್ಟಿಕೋನದಿಂದ ಹೇಳುವುದಾದರೆ ನಮಗೆಲ್ಲಾ ಅತೀ ಅವಶ್ಯಕವಾದ ಹಲವಾರು ತರಬೇತಿ/ಕಾರ್ಯಾಗಾರಗಳನ್ನು ಏರ್ಪಡಿಸಿದ್ದರು. ಅವುಗಳಲ್ಲಿ ಕೆಲವನ್ನು ಉದಾಹರಿಸುವುದಾದರೆ ಸ್ಪೋಕನ್ ಇಂಗ್ಲೀಷ್ ಕಾರ್ಯಾಗಾರ, ಪಬ್ಲಿಕ್ ಸ್ಪೀಕಿಂಗ್ ತರಬೇತಿ, ಫೋಟೋಗ್ರಫಿ ತರಬೇತಿ, ವಿಷಯ ಸಂಪದೀಕರಣ ತರಬೇತಿ ಇತ್ಯಾದಿ. ಕಾಲಕಾಲಿಕ ಸಭೆಗಳ ಮೂಲಕ ಪ್ರತಿಯೊಬ್ಬರ ಅಂತಃಶ್ಯಕ್ತಿಗೆ ಹೊಸ ಚೈತನ್ಯ ನೀಡುತ್ತಿದ್ದರು. ಇವರು ಕೇವಲ ಶಿಕ್ಷಕರ ವೃತ್ತಿ ಕೌಶಲ್ಯ ವರ್ಧನೆಗಷ್ಟೇ ಒತ್ತು ಕೊಡುತ್ತಿರಲಿಲ್ಲ. ಶಾಲೆಯ ಎಲ್ಲಾ ಕ್ಷೇತ್ರಗಳನ್ನೂ ಸುಧಾರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರು. ಕಛೇರಿ ಸಿಬ್ಬಂಧಿಗಳಿಗೂ ಸಹಾಯವಾಗುವ ಹಲವಾರು ಸುಧಾರಣೆಗಳನ್ನು ತಂದಿದ್ದಾರೆ. ಶಾಲೆಯ ಪ್ರಗತಿಪರ ಕೆಲಸಗಳಲ್ಲಿ ಮತ್ತೊಂದು ಹೆಜ್ಜೆಯೆಂದರೆ ಅದು ಶಾಲಾ ನಿಯತಕಾಲಿಕೆಯಾದ Campus Chronicle ನ ಬಿಡುಗಡೆ. ಇದರ ಮೂಲಕ ವಿದ್ಯಾರ್ಥಿಗಳಲ್ಲಿ ಅಡಗಿದ್ದ ಒಬ್ಬ ಬರಹಗಾರನನ್ನು ಪರಿಚಯಿಸುವ ವಿಶಿಷ್ಟ ಕಾರ್ಯಕ್ಕೆ ನಾಂದಿ ಹಾಡಿದರು. ಶಾಲೆಗೆ ಸಂಬಂಧಿಸಿದಂತೆ ಒಂದು ಯೂಟ್ಯೂಬ್ ಚಾನೆಲ್‌ನ್ನೂ ಪ್ರಾರಂಭಿಸಿದರು. ಶಾಲೆಯಲ್ಲಿ ಜರುಗುವ ಸಮಾರಂಭಗಳು, ಆಚರಣೆಗಳನ್ನು ವಿಡಿಯೋ ರೆಕಾರ್ಡ್ ಮಾಡಿ ಅದನ್ನು ಯೂಟ್ಯೂಬ್ ನಲ್ಲಿ ಪ್ರಸಾರ ಮಾಡುವ ಮುಖಾಂತರ ನಮ್ಮ ಶಾಲೆಯ ಕೀರ್ತಿ ಎಲ್ಲಡೆ ಪಸರಿಸಲು ಅನುಕೂಲಿಸಿದರು. ಈ ಯೂಟ್ಯೂಬ್ ನ ಮೂಲಕ ಹಲವಾರು ಸ್ಪರ್ಧೆಗಳನ್ನೂ ಏರ್ಪಡಿಸಿ ನಮ್ಮ ಶಾಲೆಯು ತಾಂತ್ರಿಕವಾಗಿ ಮುಂದುವರೆದಿದೆ ಎಂಬುದನ್ನು ಸಾಬೀತು ಮಾಡಿದರು. ಇವೆಲ್ಲಕ್ಕೂ ಕಳಶಪ್ರಾಯವಾಗಿ ಇವರ ಅಧಿಕಾರಾವಧಿಯಲ್ಲಿ ನಮ್ಮ ಶಾಲೆಗೆ ಸಿಬಿಎಸ್‌ಇ ಮಾನ್ಯತೆ ದೊರೆತಿದುದರ ಜೊತೆಗೆ ೧೧ನೇ ತರಗತಿಗೂ ಮಾನ್ಯತೆ ದೊರೆಯಿತು. ನಮ್ಮ ವೃತ್ತಿಗೆ ವಿಶೇಷ ಸ್ವರೂಪ ನೀಡಿ ಸದಾ ನಮ್ಮೊಂದಿಗೆ ಇದ್ದ ಫಾ. ಜೋಸ್‌ರವರು ಸೇಂಟ್ ನೋರ್ಬರ್ಟ್‌ನ ಎಲ್ಲಾ ಫಾದರ್‌ಗಳ ಮುಖ್ಯಸ್ಥರಾಗಿ ಆಯ್ಕೆಗೊಂಡು ವರ್ಗಾವಣೆಯಾಗಿದ್ದಾರೆ. ಇದು ಒಂದೆಡೆ ಸಂತೋಷದ ವಿಷಯವಾದರೂ ಮತ್ತೊಂದೆಡೆ ದುಃಖವನ್ನು ತರುತ್ತದೆ. ಏನೇ ಆಗಲಿ ಅವರಿಗೆ ದೊರಕಿರುವ ಈ ಸ್ಥಾನ ನ್ಯಾಯಯುತವಾಗಿರುವುದೆಂದು ಭಾವಿಸುತ್ತಾ, ಅವರ ಸೇವೆ ವಿಸ್ತೃತವಾಗಿ ಹಬ್ಬಲಿ ಎಂದು ಆಶಿಸುತ್ತೇನೆ. ಅವರ ಈ ನೂತನ ಜವಾಬ್ಧಾರಿಯನ್ನು ನಿಭಾಯಿಸುವ ಶಕ್ತಿ, ಸಾಮರ್ಥ್ಯವನ್ನು ಕರುಣಾಕರನಾದ ಕರ್ತನು ದಯಪಾಲಿಸಲಿ ಎಂದು ವಿನಮ್ರತೆಯಿಂದ ಬೇಡಿಕೊಳ್ಳುತ್ತೇನೆ.

# PHOTO GALLERY ACADEMIC YEAR: 2022-23

















**Prizes Under Different Categories**



**Best Teacher Award**



**Quiz Competition I Prize**

# PHOTO GALLERY ACADEMIC YEAR: 2022-23



Quiz Competition II Prize



Quiz Competition III Prize




Throwball First Place




Volleyball First Place




Kabbadi First Place




Overall Championship Award - Blue House



Edlet Publications Know My World Grade 5



Edlet Publications Colour My World Grade 1 & 2



Edlet Publications Know My World Grade 6 to 8



Edlet Publications Colour My World Grade 3 & 4

## ಸ್ವಾತಂತ್ರ್ಯ ದಿನಾಚರಣೆ: ಅರ್ಪಿತಾ ೯ನೇ ತರಗತಿ

೨೦೦ ವರ್ಷಗಳಿಗೂ ಹೆಚ್ಚು ಕಾಲವನ್ನು ಆಳಿದ ಬ್ರಿಟೀಷ್ ವಸಾಹತುಶಾಹಿಯ ಹಿಡಿತದಿಂದ ವಿಮೋಚನೆಯಾಗಿದ್ದು ೧೫, ಆಗಸ್ಟ್ ೧೯೪೭. ಈ ದಿನವನ್ನು ಸ್ವಾತಂತ್ರ್ಯ ದಿನವನ್ನಾಗಿ ಭಾರತದಾದ್ಯಂತ ಆಚರಿಸುತ್ತೇವೆ. ಇದು ಭಾರತೀಯರಿಗೆ ಹೆಮ್ಮೆಯ, ಸಡಗರದ ಸುಂದರ ಕ್ಷಣ. ದೇಶದ ವಿವಿಧ ಭಾಗಗಳಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯುತ್ತದೆ. ನಮ್ಮ ಭಾರತ ದೇಶದಲ್ಲಿ ಎಲ್ಲಾ ಜಾತಿ-ಧರ್ಮದ ಜನರೂ ಒಗ್ಗಟ್ಟಿನಿಂದ ಬದುಕುತ್ತಿದ್ದಾರೆ. ಹಾಗಾಗಿ ನಮ್ಮ ದೇಶ ಸರ್ವಧರ್ಮೀಯರ ದೇಶ ಎಂದು ಗುರುತಿಸಿಕೊಂಡಿದೆ. ಭಾರತದ ರಾಷ್ಟ್ರೀಯ ಧ್ವಜವು ಮೊದಲು ದೆಹಲಿಯ ಕೆಂಪುಕೋಟೆಯಲ್ಲಿ ಹಾರಿಸಲಾಯಿತು. ನಮ್ಮ ಶಾಲೆಯಲ್ಲಿ ಧ್ವಜಾರೋಹಣಕ್ಕೆಂದು ಮುಖ್ಯ ಅತಿಥಿಗಳಾಗಿ ನರಸೀಪುರ ತಾಲ್ಲೋಕಿನ ವೃತ್ತ ನಿರೀಕ್ಷಕರಾದ ಶ್ರೀಯುತ ಕೃಷ್ಣಪ್ಪ ಎಸ್ ಜಿ ರವರನ್ನು ಆಹ್ವಾನಿಸಿದ್ದೆವು. ಅವರನ್ನು ನಮ್ಮ ಶಾಲೆಯ ವ್ಯವಸ್ಥಾಪಕ ವೃಂಧ, ಪ್ರಾಂಶುಪಾಲರು ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳು ಶಾಲಾ ವಾದ್ಯ ಗೋಷ್ಟಿಯೊಂದಿಗೆ ವೇದಿಕೆಗೆ ಕರೆತರಲಾಯಿತು. ಸಮಾರಂಭವು ಧ್ವಜಾ ರೋಹಣದ ಮೂಲಕ ಆರಂಭವಾಯಿತು. ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದ ಮುಖ್ಯ ಅತಿಥಿಗಳು ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ಸ್ಥಿತಿಗತಿಗಳ ಬಗ್ಗೆ ವಿಸ್ತೃತವಾಗಿ ವಿವರಿಸಿದರು. ಶಾಲೆಯ ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಪಥಸಂಚಲನ ಪ್ರದರ್ಶಿಸಿದರು. ತದನಂತರ ವೇದಿಕೆಯ ಕಾರ್ಯಕ್ರಮಗಳು ಪ್ರಾರಂಭವಾದವು. ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರು ಬಹುಮಾನ ವಿತರಿಸಿ ಅವರನ್ನು ಉತ್ತೇಜಿಸಿದರು. ಈ ಆಚರಣೆಯು ಕೇವಲ ಮನರಂಜನೆಗಷ್ಟೇ ಸೀಮಿತವಾಗಿರದೇ ನಮ್ಮ ಜ್ಞಾನವಮಟ್ಟವನ್ನೂ ಹೆಚ್ಚಿಸುವ ನಿಟ್ಟಿನಲ್ಲಿ ರೂಪುಗೊಂಡಿತ್ತು. ಇದಕ್ಕೆ ಪೂರಕ ಎಂಬಂತೆ ವಿದ್ಯಾರ್ಥಿನಿಯಾದ ಗೌರಿ ಕಾಂತರಾಜು ನೀಡಿದ ಪ್ರಬುದ್ಧ ಭಾಷಣ. ಇದರ ಮುಖೇನ ನಮಗೆ ಸ್ವಾತಂತ್ರ್ಯದ ಸಾರ ಅರಿವಿಗೆ ಬಂತು. ನಂತರ ಪಿ ಯು ವಿಭಾಗದ ವಿದ್ಯಾರ್ಥಿಗಳು ಒಂದು ಸುಂದರವಾದ ಮತ್ತು ಅರ್ಥಪೂರ್ಣವಾದ ಕಿರುನಾಟಕವನ್ನು ಪ್ರದರ್ಶಿಸಿದರು. ಇದು ನಮ್ಮ ದಿನನಿತ್ಯದ ಬದುಕಿಗೆ ಹತ್ತಿರವಾದದ್ದಾಗಿದ್ದರಿಂದ ಆಪ್ತವಾಯಿತು. ಕೊನೆಯದಾಗಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಶಾಲೆಯ ವ್ಯವಸ್ಥಾಪಕರಾದ ಫಾ. ಜೋಸ್ ಮುರಿಕ್ಕನ್‌ರವರು ತಮ್ಮ ಅಧ್ಯಕ್ಷೀಯ ನುಡಿಗಳನ್ನು ಆಡಿ ಸ್ವತಂತ್ರ ಭಾರತದ ವಿವಿಧ ಮಜಲುಗಳನ್ನು ಪರಿಚಯಿಸಿದರು ಹಾಗೂ ವೈಯುಕ್ತಿಕ ಸ್ವಾತಂತ್ರ್ಯದ ಪ್ರಾಮುಖ್ಯತೆ ಮತ್ತು ಅವಶ್ಯಕತೆಯ ಬಗ್ಗೆ ಸರಳವಾಗಿ ವಿವರಿಸಿದರು. ಒಟ್ಟಾರೆಯಾಗಿ ನಮ್ಮ ಶಾಲೆಯಲ್ಲಿ ಆಚರಿಸಿದ ಈ ಸಲದ ಸ್ವಾತಂತ್ರ್ಯ ದಿನಾಚರಣೆಯು ಸಂಸ್ಕೃತಿಯ ಪ್ರಸಾರ ಹಾಗೂ ಸಾಮಾನ್ಯ ಜ್ಞಾನ ಎರಡನ್ನೂ ಹೊಸೆದುಕೊಂಡು ಸಾಗಿ ನಮ್ಮ ಮನೋವಲಯವನ್ನು ಆವರಿಸಿಕೊಂಡಿತು ಎಂದರೂ ತಪ್ಪಾಗುವುದಿಲ್ಲ.

## ಕನ್ನಡ ರಾಜ್ಯೋತ್ಸವ : ಹರ್ಷಿತಾ ಟಿ ಕೆ ೧೦ನೇ ತರಗತಿ

'ಕಲಿಯೋಕೆ ಕೋಟಿಭಾಷೆ ಆಡೋಕೆ ಒಂದೇ ಭಾಷೆ, ಕನ್ನಡಾ.. ಕನ್ನಡಾ... ಕಸ್ತೂರೀ... ಕನ್ನಡ...' ಕನ್ನಡ ರಾಜ್ಯೋತ್ಸವವನ್ನು ಕರ್ನಾಟಕ ರಚನಾ ದಿನ ಅಥವಾ ಕರ್ನಾಟಕ ದಿನ ಎಂದು ಕರೆಯುತ್ತಾರೆ. ಇದು ೧೯೫೬ರಲ್ಲಿ ನೈರುತ್ಯ ಭಾರತದ ಎಲ್ಲಾ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಕರ್ನಾಟಕ ರಾಜ್ಯವನ್ನು ರೂಪಿಸಿದ ದಿನ. ಈ ದಿನವನ್ನು ಕರ್ನಾಟಕದ ಎಲ್ಲಾ ಕನ್ನಡಿಗರಿಗೆ ಅತ್ಯಂತ ವಿಶೇಷವಾದ ದಿನವೆಂದು ಪರಿಗಣಿಸಲಾಗಿದೆ. ರಾಜ್ಯೋತ್ಸವ ಎಂದರೆ ರಾಜ್ಯದ ಹುಟ್ಟು ಭಾರತದಲ್ಲಿ ಕನ್ನಡ ಮಾತನಾಡುವ ಎಲ್ಲಾ ಪ್ರದೇಶಗಳನ್ನೂ ವಿಲೀನಗೊಳಿಸಿ ರಾಜ್ಯವನ್ನು ರಚಿಸಲಾಯಿತು. ಅದಕ್ಕೆ ಕರ್ನಾಟಕ ಎಂದು ಹೆಸರಿಸಲಾಯಿತು. ಕನ್ನಡ ರಾಜ್ಯೋತ್ಸವವನ್ನು ನವೆಂಬರ್ ೧ ರಂದು ಆಚರಿಸಲಾಗುತ್ತದೆ. ಹಾಗೆಯೇ ನಮ್ಮ ಶಾಲೆಯಲ್ಲೂ ಕೂಡ ನವೆಂಬರ್ ೧ ರಂದು ೬೭ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಈ ವರ್ಷ ನಮ್ಮ ಶಾಲೆಯಲ್ಲಿ, ನಮ್ಮ ನೆಲದ ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ನಮ್ಮ ಶಾಲೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಯುತ ಮು. ನಾ. ರಮೇಶ್‌ರವರನ್ನು ಎತ್ತಿನ ಗಾಡಿಯಲ್ಲಿ ಸಮಾರಂಭದ ಸ್ಥಳಕ್ಕೆ ಕರೆತರಲಾಯಿತು. ಇವರಿಗೆ ಜೊತೆಯಾದವರು ನಮ್ಮ ಶಾಲೆಯ ವ್ಯವಸ್ಥಾಪಕ ಮಂಡಳಿಯವರು. ಎಲ್ಲರೂ ಒಟ್ಟಾಗಿ ವೇದಿಕೆ ಪ್ರವೇಶಿಸಿದರು. ಸಮಾರಂಭವು ಸಂಪೂರ್ಣವಾಗಿ ಕನ್ನಡಮಯವಾಗಿದ್ದುದು ವಿಶೇಷ. ಕಾರ್ಯಕ್ರಮವವನ್ನು ಉದ್ಘಾಟಿಸಿ ಮಾತನಾಡಿದ ಶಾಲೆಯ ಸಂಯೋಜಕರಾದ ಫಾ. ರಾಜೇಶ್ ಮ್ಯಾಥ್ಯುರವರು ಎಲ್ಲಾ ಕನ್ನಡಿಗರಿಗೂ ಮತ್ತು ಸಮಾರಂಭಕ್ಕೆ ಶುಭ ಹಾರೈಸಿದರು. ನಂತರ ಮಾತನಾಡಿದ ಮುಖ್ಯ ಅತಿಥಿಗಳು ಕನ್ನಡ ನಾಡು ನುಡಿಯ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಿದರು. ಕನ್ನಡ ನಾಡಿನ ಸಂಸ್ಕೃತಿ ಸಾರುವ ಗೀತೆಗಳಿಗೆ ಹೆಜ್ಜೆ ಹಾಕಿದ ವಿದ್ಯಾರ್ಥಿಗಳು ಎಲ್ಲರ ಮನ ಗೆದ್ದರು. ಜಾನಪದ ಗೀತೆಗಳು, ಪಾಶ್ಚಾತ್ಯ ಸಂಗೀತದ ಸ್ಪರ್ಶ ಹೊಂದಿದ್ದ ಗೀತೆಗಳಿಗೆ ತಾಳಕ್ಕೆ, ಲಯಕ್ಕೆ ಹೆಜ್ಜೆಗಳನ್ನಿತ್ತು ನೋಡುಗರ ಅವಧಾನವನ್ನು ತನ್ನೆಡೆಯಿಂದ ಕದಲದಂತೆ ಮಾಡಿದ್ದವು. ಸಮಾರಂಭದ ಮತ್ತೊಂದು ವೈಶಿಷ್ಟ್ಯವೆಂದರೆ ಎಲ್ಲಾ ಶಿಕ್ಷಕರೂ ಕನ್ನಡ ನಾಡಿನ ಬಾವುಟದ ಬಣ್ಣದ ರುಮಾಲನ್ನು ಧರಿಸಿದ್ದರು. ಸಮಾರಂಭದ ವೇದಿಕೆ ಅದ್ದೂರಿಯಾಗಿಯೂ, ವರ್ಣರಂಜಿತವಾಗಿಯೂ, ವಿಭಿನ್ನವಾಗಿಯೂ ಸಿದ್ಧಗೊಳಿಸಿದ್ದರು. ಕಾರ್ಯಕ್ರಮದ ಮತ್ತೊಂದು ಆಕರ್ಷಣೆಯೆಂದರೆ ೧೦ನೇ ತರಗತಿಯವರು ಪ್ರಸ್ತುತಪಡಿಸಿದ ನೃತ್ಯರೂಪಕ. ಹೊಯ್ಸಳ ವಂಶದ ಸ್ಥಾಪನೆ ಮತ್ತು ವೈಭವಯುತ ಸಾಮ್ರಾಜ್ಯವನ್ನು ಪುನರ್ ಸೃಷ್ಟಿ ಮಾಡಿದರು. ಇವೆಲ್ಲದರ ಜೊತೆಗೆ ಶಿಕ್ಷಕರೂ ಕೂಡ ಒಂದು ಹಾಡನ್ನು ಹಾಡಿದರು. ಇದು ಕೇಳಲು ಬಹಳ ಇಂಪಾಗಿತ್ತು. ಅಂತಿಮವಾಗಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಪ್ರಾಂಶುಪಾಲರಾದ ಸಿ. ಸುಮಿ ರೋಸಾರವರು ಎಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿದರು.

## ಮಕ್ಕಳ ದಿನಾಚರಣೆ : ಗೌತಮಿ ಕೆ ಎನ್ ೮ನೇ ತರಗತಿ 'ಎ' ವಿಭಾಗ

ನಮ್ಮ ದೇಶದ ಮೊದಲ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಾಹರ್‌ಲಾಲ್ ನೆಹರುರವರ ಜನ್ಮದಿನವಾದ ನವೆಂಬರ್ ೧೪ನ್ನು ದೇಶದಾದ್ಯಂತ ಮಕ್ಕಳ ದಿನಾಚರಣೆ' ಎಂಬ ಹೆಸರಿನಿಂದ ಆದರಿಸುವ ವಾಡಿಕೆಯಿದೆ. ಮಕ್ಕಳ ದಿನಾಚರಣೆಯ ಅಂಗವಾಗಿ ನಮ್ಮಶಾಲೆಯಲ್ಲಿಯೂ ಸಹ ತುಂಬಾ ಸಡಗರ ಸಂಭ್ರಮದಿಂದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಶಿಕ್ಷಕರು ಮಕ್ಕಳಾಗಿ ನಮ್ಮ ಮುಂದೆ ಅನೇಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ಅದನ್ನು ಈ ರೀತಿಯಲ್ಲಿ ವಿವರಿಸುತ್ತಾ ಹೋಗಬಹುದು. ಈ ಕಾರ್ಯಕ್ರಮ ಇತರೆ ಸಮಾರಂಭಗಳಿಗಿಂತ ಭಿನ್ನವಾಗಿತ್ತು. ಸಾಧಾರಣವಾಗಿ ಯಾವುದೇ ಸಮಾರಂಭಗಳಲ್ಲಿ ಶಾಲೆಯ ಮುಖ್ಯಸ್ಥರು ವೇದಿಕೆಯನ್ನು ಅಲಂಕರಿಸಿರುತ್ತಾರೆ. ಆದರೆ ಈ ಸಮಾರಂಭದಲ್ಲಿ ವೇದಿಕೆಯ ಮೇಲೆ ವಿರಾಜಿಸಿದ್ದವರು ವಿದ್ಯಾರ್ಥಿ ಪ್ರತಿನಿಧಿಗಳು. ಬಹುಷಃ ಈ ಬದಲಾವಣೆ ಪ್ರಸ್ತುತ ದಿನಕ್ಕೆ ಸಮಂಜಸವಾಗಿತ್ತು. ಮೊದಲಿಗೆ ಪ್ರಾಸ್ತವಿಕ ನುಡಿಗಳನ್ನು ಆಡಲು ಒಬ್ಬ ವಿಶಿಷ್ಟ ವ್ಯಕ್ತಿಯ ಆಗಮನವಾಯಿತು. ಆ ವ್ಯಕ್ತಿಯಾರೆಂದರೆ ಸ್ವತಃ ನೆಹರುರವರು. ಆಶ್ಚರ್ಯವಾಯಿತು, ಮತ್ತೊಮ್ಮೆ ದಿಟ್ಟಿಸಿ ನೋಡಿದೆವು, ಅವರು ನೆಹರು ವೇಶ ಧರಿಸಿದ್ದ ನಮ್ಮ ಶಾಲಾ ಶಿಕ್ಷಕರು. ಆ ಧಿರಿಸಿನಲ್ಲಿ ಶಿಕ್ಷಕರು ಸ್ವತಃ ನೆಹರು ರೀತಿಯೇ ಕಾಣುತ್ತಿದ್ದರು. ಅವರು ಪ್ರಸ್ತುತ ದಿನದ ಹಿನ್ನೆಲೆ ಮತ್ತು ಪ್ರಾಮುಖ್ಯತೆಯನ್ನು ವಿವರಿಸಿದರು. ಅದಾದ ನಂತರ ಒಂದೊಂದಾಗಿ ಶಿಕ್ಷಕರ ಕಾರ್ಯಕ್ರಮಗಳು ಆರಂಭವಾದವು. ವಾವ್! ಎಂತಹ ಪ್ರದರ್ಶನಗಳನ್ನು ಪ್ರಸ್ತುತಪಡಿಸಿದರೆಂದರೆ ಒಂದುಕ್ಷಣ ನಾವೇ ಬೆರಗಾಗಿ ಹೋದೆವು. ಪ್ರಾಂಶುಪಾಲರಾದಿಯಾಗಿ ಎಲ್ಲರೂ ಭಾಗವಹಿಸಿದುದು ವಿಶೇಷವಾಗಿತ್ತು. ಅಂದು ಶಿಕ್ಷಕರು ನೀಡಿದ ಈ ಮನರಂಜನಾ ಕಾರ್ಯಕ್ರಮಗಳು ಅವರ ಬಹುಮುಖ ಪ್ರತಿಭೆಯನ್ನು ಹೊರಹೊಮ್ಮಿಸಿದವು.

ಇದುವರೆವಿಗೂ ಅವರಿಂದ ಕೇವಲ ಪಾಠ-ಪ್ರವಚನಗಳನ್ನು ಕಂಡಿದ್ದ ನಾವು ಇದೀಗ ಅವರ ಅಮೋಘ ಹಾಗೂ ಪ್ರಬುದ್ಧ ನೃತ್ಯ ನಟನಾ ಕೌಶಲಗಳನ್ನೂ ನೋಡಿ ಹುಬ್ಬೇರಿಸಿದೆವು. ಮತ್ತುಇಂತಹ ಗುರುಗಳು ನಮಗೆ ಸಿಕ್ಕಿರುವುದೇ ನಮ್ಮ ಪುಣ್ಯಎಂದು ಅಂದುಕೊಂಡೆವು. ಇವೆಲ್ಲಾ ವೇದಿಕೆ ಕಾರ್ಯಕ್ರಮಗಳ ಬಗೆಗಿನ ವಿಶ್ಲೇಷಣೆಯಾದರೆ, ಶಾಲೆಯ ಒಳಾಂಗಣವನ್ನು ಸಿಂಗರಿಸಿದ್ದ ಪರಿಅತ್ಯಂತಆಕರ್ಷಕವಾಗಿತ್ತು. ಕಾರಿಡಾರ್‌ನಒಂದು ಬದಿಯ ತುಂಬಾ ವರ್ಣರಂಜಿತವಾದಕಾರ್ಟೂನ್‌ನಲ್ಲಿ ಬರುವ ಪಾತ್ರಗಳನ್ನು ಚಿತ್ರಿಸಲಾಗಿತ್ತು. ಇವು ನಮ್ಮನ್ನೆಲ್ಲಾ ಕೈಬೀಸಿ ಸ್ವಾಗಿತಿಸುತ್ತಿದ್ದವು. ಅದರೊಂದಿಗೆ ಕೆಲವಾರು ಸುಭಾಷಿತಗಳನ್ನೂ, ಹಿತನುಡಿಗಳನ್ನೂ ಬರೆದುಅಂಟಿಸಲಾಗಿತ್ತು. ಇವು ನಮ್ಮಲ್ಲಿ ಮೌಲ್ಯವರ್ಧನೆಗೆ ಪೂರಕವಾಗಿದ್ದವು. ನಮ್ಮಲ್ಲಿ ನಕಾರಾತ್ಮಕ ಭಾವನೆಗಳನ್ನು ತೊಡೆದು, ಧನಾತ್ಮಕ ಭಾವನೆಗಳನ್ನು ಬೆಳೆಸುವಂತಿದ್ದವು ಈ ಸುಭಾಷಿತಗಳು. ಒಟ್ಟಿನಲ್ಲಿ ಒಂದು ಪ್ರತಿಭಾವಂತರ ಸಮಾರಂಭ ಮುಕ್ತಾಯವಾಯಿತು.

## ಶಿಕ್ಷಕರ ದಿನಾಚರಣೆ : ನಾಗಾಮೃತ ಎಂ ೮ನೇ ತರಗತಿ, ಬಿ ವಿಭಾಗ

ಸೆಪ್ಟೆಂಬರ್ ೫ ಬಂತೆಂದರೆ ಎಲ್ಲಾ ಶಾಲೆಗಳಲ್ಲೂ ಹಬ್ಬದ ವಾತಾವರಣ ತುಂಬಿ ತುಳುಕುತ್ತಿರುತ್ತದೆ. ಶಿಕ್ಷಕರನ್ನು ಹಾಡಿ ಹೊಗಳುವ, ಅವರ ತ್ಯಾಗ ಪರಿಶ್ರಮಗಳನ್ನು ಕೊಂಡಾಡುವ, ವಿದ್ಯಾರ್ಥಿಗಳ ಹಿತಕ್ಕಾಗಿ ನಿಸ್ವಾರ್ಥ ಸೇವೆ ನೀಡುವ ಅವರ ಈ ಪವಿತ್ರ ಕಾರ್ಯವನ್ನು ಸ್ಮರಿಸುವ, ಶ್ಲಾಘಿಸುವ ಮಹತ್ವಪೂರ್ಣ ದಿನ. ಸೆಪ್ಟೆಂಬರ್ ೫, ನಮ್ಮ ದೇಶದ ಮೊದಲ ಉಪರಾಷ್ಟ್ರಪತಿಗಳಾಗಿದ್ದ ಡಾ. ಎಸ್ ರಾಧಾಕೃಷ್ಣನ್ ರವರ ಜನ್ಮದಿನ. ಅವರು ಅತ್ಯಂತ ಮೇಧಾವಿಗಳೂ, ಪ್ರತಿಭಾವಂತ ಶಿಕ್ಷಕರೂ ಆಗಿದ್ದರು. ಶಿಕ್ಷಕರ ಮೇಲಿನ ಗೌರವ ಮತ್ತು ಅವರ ಪ್ರಾಮುಖ್ಯತೆಯನ್ನು ತಿಳಿದಿದ್ದ ರಾಧಾಕೃಷ್ಣನ್‌ರವರು ತಮ್ಮ ಹುಟ್ಟಿದ ದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸುವಂತೆ ಘೋಷಿಸಿದರು. ಅಂದಿನಿಂದ ಸೆಪ್ಟೆಂಬರ್ ೫ನ್ನು ರಾಷ್ಟ್ರಾದ್ಯಂತ 'ಶಿಕ್ಷಕರ ದಿನ'ವನ್ನಾಗಿ ಆಚರಿಸುತ್ತೇವೆ.

ಶಿಕ್ಷಕರ ಗೌರವ ಸಮರ್ಪಣಾ ದಿನವನ್ನು ನಮ್ಮ ಶಾಲೆಯಲ್ಲೂ ಏರ್ಪಡಿಸಲಾಗಿತ್ತು. ಆ ದಿನ ನಾವೆಲ್ಲಾ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೆವು. ಶಿಕ್ಷಕರನ್ನು ವೇದಿಕೆಗೆ ಕರೆತಂದ ರೀತಿಯೇ ವಿಶಿಷ್ಟವಾಗಿತ್ತು. ಎಲ್ಲರನ್ನೂ ಒಟ್ಟಾಗಿ ಕರೆತಂದು ಈ ಮೊದಲೇ ನಿಗದಿಪಡಿಸಿದ ಜಾಗದಲ್ಲಿ ಕೂರಿಸಿದೆವು. ಸಮಾರಂಭದ ಎಲ್ಲಾ ಕಾರ್ಯಕ್ರಮಗಳನ್ನೂ ವಿದ್ಯಾರ್ಥಿಗಳೇ ರಚಿಸಿದ್ದೆವು. ಒಂದರ ಹಿಂದೆ ಒಂದರಂತೆ ಎಲ್ಲಾ ಕಾರ್ಯಕ್ರಮಗಳೂ ಜರುಗಿದವು. ಎಲ್ಲೂ ಸ್ವಲ್ಪವೂ ಲೋಪ ಬಾರದ ಹಾಗೆ ಕಾರ್ಯಕ್ರಮಗಳು ನಡೆದವು. ವಿದ್ಯಾರ್ಥಿಗಳೆಲ್ಲಾ ಅಚ್ಚುಕಟ್ಟಾಗಿ ತಮಗೆ ದೊರೆತ ಜವಾಬ್ಧಾರಿಗಳನ್ನು ನಿಭಾಹಿಸಿದರು. ಈ ವಿಭಿನ್ನಕಾರ್ಯಕ್ರಮಗಳಿಗೆ ಮನಸೋತ ನಮ್ಮ ನೆಚ್ಚಿನ ಶಿಕ್ಷಕ ವೃಂದ ಕರತಾಡನವನ್ನಲ್ಲದೇ ಬೇರೇನನ್ನೂ ಮಾಡುವ ಹಾಗೆ ಇರಲಿಲ್ಲ. ಪೂರ್ವ ಪ್ರಾಥಮಿಕ ಹಂತದ ವಿದ್ಯಾರ್ಥಿಗಳಿಂದ ಹಿಡಿದು ೧೦ನೇ ತರಗತಿಯವರೆವಿಗೂ ಎಲ್ಲಾ ವಿಭಾಗದ ವಿದ್ಯಾರ್ಥಿಗಳೂ ಪ್ರದರ್ಶಿಸಿದ ಹಾಡು, ನೃತ್ಯ, ನೃತ್ಯರೂಪಕಗಳು ಕಣ್ಣು ಹಾಗೂ ಮನಸ್ಸಿಗೆ ಉಲ್ಲಾಸವನ್ನು ಮೂಡಿಸಿದ್ದವು. ಹೀಗೆ ನಮ್ಮ ಶಾಲೆಯಲ್ಲಿ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆಯು ಸುಂದರವಾಗಿ ಮೂಡಿಬಂದು ನಂನಮ್ಮ ಶಿಕ್ಷಕರಿಂದ ಪ್ರಶಂಸೆಯ ನುಡಿಗಳನ್ನು ಪಡೆದುಕೊಂಡೆವು. ಅವರಿಗೆ ಸಲ್ಲಬೇಕಾದ ಗೌರವಕ್ಕೆ ಎಲ್ಲೂ ಚ್ಯುತಿ ಬಾರದ ಹಾಗೆ ಪ್ರೀತಿಯಿಂದ ನಮ್ಮ ಅಭಿಮಾನವನ್ನು ಸಮರ್ಪಿಸಿದೆವು.


**Chief Editor**

Fr. Rajesh O. Praem

**Editorial Team**

Mr. Lokesh
Ms. Neethu
Mahadev Prasad H N
Dhanushree M

**Design Editor**

Mr. Manjunath Prakash